ಮಗಳು ಪರೀಕ್ಷೆ ಮುಗಿದ ನಂತರವೂ ಮನೆಗೆ ಬಂದಿರಲೇ ಇಲ್ಲ. ವಿಚಾರಿಸಿದಾಗಲೇ ಗೊತ್ತಾಗಿದ್ದು, ಅವಳು ಹುಡುಗನೊಬ್ಬನೊಂದಿಗೆ ಪರಾರಿಯಾಗಿ ಮದುವೆಯಾಗಿದ್ದಾಳೆಂದು! ಹೀಗಾಗಿ ಸೀತಾಲಕ್ಷ್ಮಿಯ ಮನೆಯ ವಿಷಯದಲ್ಲೂ ಚಿದಂಬರ ಭಟ್ಟರು ಹೋದ ನಂತರ ಊರವರು ಮೊದಲಿನಷ್ಟು ಬಿಗುವಾಗಿರಲಿಲ್ಲ. ಹಾಗಂತ ಒಮ್ಮೆ ಬಿಟ್ಟುಹೋಗಿದ್ದ ವೈದಿಕ ಶ್ರಾದ್ಧಗಳಿಗೆ ಕರೆಯುವುದನ್ನು ಮತ್ತೆ ಮುಂದುವರೆಸಿದರು ಅಂತಲ್ಲ. ಬೇರೆಯವರ ಮನೆಯ ಸುದ್ದಿ ನಮಗ್ಯಾಕೆ? ಅವರ ಬದುಕು ಅವರ ಸಮಸ್ಯೆ ಎಂದು ತಮ್ಮ ಪಾಡಿಗಿರುತ್ತಿದ್ದರು. ಕಾಲ ಓಡುತ್ತಾ ಬದಲಾವಣೆಯ ಗಾಳಿ ಬೀಸುತ್ತಾ ಓದು, ಕೆಲಸ ಎಂದು ಊರು ಬಿಟ್ಟು ಹೊರಗೆ ಕಾಲಿಟ್ಟ ಮಕ್ಕಳು ಮೊಮ್ಮಕ್ಕಳ ದೆಸೆಯಿಂದಾಗಿ ನಂಬಿಕೆಗಳು ಸಂಪ್ರದಾಯಗಳು ಉದಾರವಾಗುತ್ತಾ ಬದುಕಿನ ವ್ಯವಹಾರಗಳಲ್ಲಿ ಮೊದಲಿನ ಕಟ್ಟುನಿಟ್ಟು ಇರಲಿಲ್ಲ. ನಿಧಾನವಾಗಿ ವಿಶ್ವನಾಥನೂ ಮನೆಗೆ ಬಂದು ಹೋಗುವುದಕ್ಕೆ ಶುರು ಮಾಡಿದ್ದರೂ ಹೆಂಡತಿ ಮಕ್ಕಳನ್ನು ಮಾತ್ರ ಕರೆದುಕೊಂಡು ಬಂದಿರಲಿಲ್ಲ. ಬದುಕು ಹಿಂದೆ ಹಾಕಿಕೊಂಡಿದ್ದ ಬೇಲಿಯೊಳಗೇ ನಡೆಯುತ್ತಿತ್ತು. ದಣಪೆ ದಾಟಿ ವಿಶ್ವನಾಥ ಒಳಗೆ ಬರುತ್ತಿದ್ದನಾದರೂ ಬೇಲಿಯನ್ನು ಕಿತ್ತೊಗೆಯುವ ಸಾಹಸಕ್ಕೆ ಕೈ ಹಾಕಿರಲಿಲ್ಲ. ಸೀತಾಲಕ್ಷ್ಮಿಗೆ ಮನೆಯಲ್ಲಿ ಒಬ್ಬಳೇ ಇದ್ದೂ ಇದ್ದೂ ತಲೆ ಚಿಟ್ಟು ಹಿಡಿದಿದ್ದರೂ. ಮಾತಿಗಾಗಿ ಹಂಬಲಿಸುತ್ತಿದ್ದರೂ ಗವ್ವೆನ್ನುವ ಮೌನವನ್ನು ದ್ವೇಷಿಸುತ್ತಿದ್ದರೂ ಅದೇನೋ ಇಷ್ಟು ವರ್ಷಗಳಲ್ಲಿ ಸೊಸೆಯನ್ನೂ ಮೊಮ್ಮಕ್ಕಳನ್ನೂ ಕರೆದುಕೊಂಡು ಬಾ ಎನ್ನುವುದಕ್ಕೆ ಬಾಯಿ ಬಂದಿರಲಿಲ್ಲ. ದ್ವೀಪಗಳಲ್ಲಿ ಬದುಕುವುದು ರೂಢಿಯಾಗಿಬಿಟ್ಟಿತ್ತು ಇಬ್ಬರಿಗೂ. ಸೇತುವೆ ಕಟ್ಟಿ ಸಂಬಂಧಗಳನ್ನು ಬೆಸೆದುಕೊಂಡು ಒಂದಾಗುವುದಕ್ಕೆ ಮನಸ್ಸು ಮಾಡಿರಲಿಲ್ಲ.

ಪ್ರತಿವರ್ಷ ಊರಿನಲ್ಲಿ ದೀಪಾವಳಿ ಹಬ್ಬ ಜೋರಾಗಿರುತ್ತಿತ್ತು. ಪೇಟೆ ಪಟ್ಟಣ, ಬೆಂಗಳೂರು ಬೇರೆ ನಗರಗಳಲ್ಲಿ ನೆಲೆಸಿರುವ ಊರ ಮಂದಿ ದೀಪಾವಳಿ ಹಬ್ಬಕ್ಕೆ ಮಾತ್ರ ತಪ್ಪದೇ ಹಾಜರಿರುತ್ತಿದ್ದರು. ಬರೀ ಅಪ್ಪ ಅಮ್ಮ, ಅಜ್ಜ ಅಜ್ಜಿ ಇಬ್ಬರೇ ಇರುತ್ತಿದ್ದ ಮನೆಗಳು ದೀಪಾವಳಿಯ ಹಿಂದೆ ಮುಂದೆ ಮಾತ್ರ ಮಕ್ಕಳು ಅಳಿಯಂದಿರು ಮೊಮ್ಮಕ್ಕಳಿಂದ ಕಲಕಲ ಎನ್ನುತ್ತಿದ್ದವು. ಸೀತಾಲಕ್ಷ್ಮಿಯ ಜೀವನದಲ್ಲಿ ಮಾತ್ರ ದೀಪಾವಳಿಯೂ ಹೊಳಪು ತರುತ್ತಿರಲಿಲ್ಲ. ಮನೆಯ ಮುಂದೆ ನಾಲ್ಕು ಹಣತೆ ಹಚ್ಚಿ ಯಥಾಪ್ರಕಾರ ಕಿಟಕಿಯಲ್ಲಿ ಕೂರುತ್ತಿದ್ದಳು. ಬಣ್ಣ ಬಣ್ಣದ ಬಟ್ಟೆ ತೊಟ್ಟು ಹಾದಿಯಲ್ಲಿ ಹೋಗುವವರನ್ನು ನೋಡುತ್ತಿದ್ದಳು. ಹೋಳಿಗೆ ಮಾಡುವುದನ್ನು ಬಿಟ್ಟು ಹಲವು ವರ್ಷಗಳಾಗಿತ್ತು. ವಿಶ್ವನಾಥ ಬಂದರೆ ಬಂದ, ಇಲ್ಲದಿದ್ದರೆ ಇಲ್ಲ. ಊರವರು ಪರಸ್ಪರ ಮಾತಾಡಿಕೊಳ್ಳುವಾಗ ಅವರ ಮಕ್ಕಳು ಮೊಮ್ಮಕ್ಕಳ ಪೈಕಿ ಯಾರಾದರೊಬ್ಬರು ಬಂದಿರದಿದ್ದರೂ ಯಾಕೆ ಬಂದಿಲ್ಲ ಈ ವರ್ಷ ಎಂದು ವಿಚಾರಿಸಿಕೊಳ್ಳುತ್ತಿದ್ದರು. ಆದರೆ ಸೀತಾಲಕ್ಷ್ಮಿಯ ಬಳಿ ಯಾರೂ ಮಗ ವಿಶ್ವನಾಥ ಬಂದಿದ್ದನೇ? ಬರುತ್ತಾನಾ? ಕೇಳುತ್ತಿರಲಿಲ್ಲ. ಚರಿತ್ರೆಯಲ್ಲಿ ನಡೆದ ಒಂದು ಘಟನೆಯಿಂದ ವಿಶ್ವನಾಥ ಊರಿನ ವರ್ತಮಾನದಲ್ಲಿ ಅಪ್ರಸ್ತುತನಾಗಿದ್ದ. ಇದೆಲ್ಲಾ ಗಮನಕ್ಕೆ ಬರುತ್ತಿದ್ದ ಸೀತಾಲಕ್ಷ್ಮಿಯ ಎದೆಯಲ್ಲಿ ಅವಲಕ್ಕಿ ಕುಟ್ಟಿದ ಹಾಗೆ ವಿಚಿತ್ರ ಸಂಕಟವಾಗುತ್ತಿತ್ತು.

ದೀಪಾವಳಿಯ ಮರುದಿನದಿಂದ ಪ್ರತೀ ಸಂಜೆ ದೇವಸ್ಥಾನದಲ್ಲಿ ಒಬ್ಬೊಬ್ಬರ ಮನೆಯ ಕಾರ್ತೀಕ ದೀಪಾರಾಧನೆ. ಅಲ್ಲಿಗೆ ಹೋದರೆ ಮಾತಾಡುವುದಕ್ಕೆ ಜನರು ಸಿಕ್ಕು ಒಂದಷ್ಟು ವಿಷಯಗಳಾದರೂ ತಿಳಿಯುತ್ತವೆ ಎಂದು ಸೀತಾಲಕ್ಷ್ಮಿ ಐದು ಗಂಟೆಗೇ ತಯಾರಾಗಿ ಕಿಟಕಿಯಲ್ಲಿ ಕುಳಿತಿದ್ದಳು. ಸ್ವಲ್ಪ ಹೊತ್ತಿಗೇ ಇಬ್ಬರು ಮಕ್ಕಳು ರಸ್ತೆಯಲ್ಲಿ ಓಡುತ್ತಿರುವುದು ಕಾಣಿಸಿತು, ಹಿಂದೆಯೇ ಪಕ್ಕದೂರಿನ ವಿಶಾಲಾಕ್ಷಿ ಮತ್ತೊಬ್ಬಳು ಹೆಂಗಸಿನೊಂದಿಗೆ ಬರುತ್ತಿರುವುದನ್ನು ನೋಡಿದಳು. ಸೀತಾಲಕ್ಷ್ಮಿ ಚೂರು ಮುಂದೆ ಬಂದು 'ಮಕ್ಕಳನ್ನು ಹಾಗೆ ಕೈ ಬಿಡಬೇಡಿ, ರಸ್ತೇಲಿ ತುಂಬಾ ವಾಹನಗಳು ಬರ್ತಿರತ್ತೆ, ಅಪಾಯ' ಎಂದವಳೇ ವಿಶಾಲಾಕ್ಷಿಯನ್ನುದ್ದೇಶಿಸಿ ಮತ್ತೊಬ್ಬಳನ್ನು ನೋಡುತ್ತಾ 'ಇವಳ್ಯಾರು? ಗೊತ್ತಾಗಲಿಲ್ಲ' ಎಂದಳು. ವಿಶಾಲಾಕ್ಷಿ 'ಇವಳು ನನ್ನ ಹಿರಿ ಸೊಸೆ, ದತ್ತಾತ್ರೇಯನ ಹೆಂಡತಿ, ಬಾಂಬೆಯಲ್ಲಿ ಇರ್ತಿದ್ರಲ್ಲ' ಎಂದಳು. ತಕ್ಷಣ ಸೀತಾಲಕ್ಷ್ಮಿಯ ತಲೆಯಲ್ಲಿ ಮೂರ್ನಾಲ್ಕು ವರ್ಷಗಳ ಹಿಂದೆ ಬಾಂಬೆಯಲ್ಲಿ ಕೆಲಸ ಮಾಡುತ್ತಿದ್ದ ದತ್ತಾತ್ರೇಯ ಅಲ್ಲಿಯ ಹುಡುಗಿಯೊಬ್ಬಳನ್ನು ಮದುವೆಯಾಗಿ ಬಂದ ಸುದ್ದಿ ಕೇಳಿದ್ದು ನೆನಪಾಗಿ 'ಓಹ್, ಆ ಹುಡುಗಿಯಾ?'